ನಿಯಮಬಾಹಿರ ಕಾಮಗಾರಿಗೆ ಗ್ರಾಮಸ್ಥರಿಂದ ತಡೆ

ಉದಯಕಾಲ ನ್ಯೂಸ್

ಬ್ಯಾಡಗಿ: ತಾಲೂಕಿನ ಹಿರೇಹಡಗಲಿ ರಸ್ತೆಯ ಚಿಕ್ಕಣಗೆರೆ ಗ್ರಾಮದಲ್ಲಿ ಸರ್ಕಾರಿಯವರು ಕೈಗೆತ್ತಿಕೊಳ್ಳಲಿರುವ ಕಾಮಗಾರಿ ನಿಯಮವನ್ನು ಗುತ್ತಿಗೆದಾರರು ಪಾಲಿಸದೆ ಉಲ್ಲಂಘನೆ ಮಾಡುತ್ತಿರುವುದನ್ನು ವಿರೋಧಿಸಿ, ಸ್ಥಳೀಯ ಗ್ರಾಮಸ್ಥರು ಕಾಮಗಾರಿ ಸ್ಥಗಿತಗೊಳಿಸಿದ ಘಟನೆ ಮಂಗಳವಾರ ಜರುಗಿದೆ.

ಈ ಕುರಿತು ಮಾತನಾಡಿದ ತಾಲೂಕು ರೈತಸಂಘದ ಮುಖಂಡ ಹಾಗೂ ಗ್ರಾಮಸ್ಥ ಮಲ್ಲಿಕಾರ್ಜುನ ಡಣಾಯಕ, ಕಳೆದ ತಿಂಗಳು ಗ್ರಾಮಸ್ಥರ ಮನವಿಗೆ ಸ್ಪಂದಿಸಿದ ಸ್ಥಳೀಯ ಶಾಸಕ ಬಸವರಾಜ ಶಿವಣ್ಣನವರ ಜೊಬೂ ಪೂಜೆ ನೆರವೇರಿಸುವ ಮೂಲಕ ಕಾಮಗಾರಿಗೆ ಚಾಲನೆ ನೀಡಿದ್ದಾರೆ. ರಸ್ತೆ ಹಾಗೂ ಸಿಡಿ, ಕಾಲುವೆ ನೇರದಂತೆ ಬೇರೆ ಬೇರೆ ಕೆಲಸಗಳನ್ನು ನಿರ್ವಹಿಸಲು 1 ಕೋಟಿ. ರೂ.ವೆಚ್ಚದ ಕ್ರಿಯಾಯೋಜನೆಗೆ ಸಿದ್ಧಪಡಿಸಲಾಗಿದೆ. ಆದರೆ ಗುತ್ತಿಗೆದಾರರು ಸಿಡಿ ನಿರ್ಮಿಸುವ ಜಾಗೆ ಬಳಸುತ್ತಿರುವ ಕಬ್ಬಿಣ ಗುಣಮಟ್ಟ ಕೊರತೆಯಿದೆ. 16 ಎಂ.ಎಂ.ಕಬ್ಬಿಣ ಬಳಸುವ ಬದಲು 8 ಎಂ.ಎಂ.ಕಬ್ಬಿಣ ಬಳಸಲಾಗುತ್ತಿದೆ. ಈ ಕುರಿತು ಗ್ರಾಮಸ್ಥರು ಪ್ರಶ್ನಿಸಿದರೆ, ಸಂಯಮಿಗಿ ಉತ್ತರ ನೀಡದೆ ಸ್ಥಳದಿಂದ ಕಾಲ್ಕಿತ್ತಿದ್ದಾರೆ. ಈ ಕುರಿತು ಲೋಕೋಪಯೋಗಿ ಇಲಾಖೆ ಇಂಜಿನೀಯರಗೆ ತಿಳಿಸಿದರೂ ಯಾವುದೇ ಸ್ಪಂದನೆ ಸಿಗುತ್ತಿಲ್ಲ, ಹೀಗಾಗಿ ಗ್ರಾಮಸ್ಥರು ಕಾಮಗಾರಿ ಸ್ಥಗಿತಗೊಳಿಸುವುದು ಕೂಡಲೇ ಸಂಬಂಧಿಸಿದ ಅಧಿಕಾರಿಗಳು ಸ್ವಕಾಮಿಸಿ ಕಾಮಗಾರಿಗೆ ಬಳಸಿದ ಸಾಮಗ್ರಿ ಪರಿಶೀಲಿಸುವ ಮೂಲಕ ಕಾಮಗಾರಿ ಕಳಪೆಯಾಗದಂತೆ ಕ್ರಮ ಮತಿಸಬೇಕೆಂದು ಒತ್ತಾಯಿಸಿದ್ದಾರೆ.

ಗ್ರಾಮಸ್ಥರೊಂದಿಗೆ ಹೋರಾಟ: ಸ್ಥಳೀಯ ಶಾಸಕರು ಕಾಮಗಾರಿ ಭೂಮಿಪೂಜೆ ಸಂದರ್ಭದಲ್ಲಿ ಗುತ್ತಿಗೆದಾರರು ಕಳಪೆ ಮಾಡಿದಲ್ಲಿ ಬಹುದಿನಗಳ ಕಾಲ ಸಿಡಿ ಹಾಗೂ ರಸ್ತೆಗಳು ಉಳಿಯುವುದಿಲ್ಲ, ಗುಣಮಟ್ಟದ ಕಾಮಗಾರಿ ನಿರ್ಮಿಸಲು ಸೂಚಿಸಿದ್ದಾರೆ. ಆದರೂ ಗುತ್ತಿಗೆದಾರರು ಸಮರ್ಪಕವಾಗಿ ಮಾಡುತ್ತಿಲ್ಲ. ಈ ಕುರಿತು ಅಧಿಕಾರಿಗಳು ಗ್ರಾಮಸ್ಥರ ಬೇಟಿ ಸ್ಥಳಗಳಿಗೆ ನ್ಯಾಯ ಒದಗಿಸಬೇಕು. ಗ್ರಾಮದ ಹಿರಿಯರೊಂದಿಗೆ ಸಭೆ ಮಾಡುವ ಮೂಲಕ ಗುಣಮಟ್ಟದ ಕಾಮಗಾರಿಗೆ ಆದ್ಯತೆ ನೀಡಬೇಕು. ನಿರ್ಲಕ್ಷ್ಯಿಸಿದ್ದಲ್ಲಿ ಗ್ರಾಮಸ್ಥರು ಲೋಕೋಪಯೋಗಿ ಇಲಾಖೆ ಎದುರು ಪ್ರತಿಭಟನೆ ನಡೆಸುವುದಾಗಿ ಎಚ್ಚರಿಸಿದ್ದಾರೆ.

ಆಯುರ್ವೇದ ಆರೋಗ್ಯಕರ ಜೀವನದ ವಿಜ್ಞಾನ: ಗೆಹ್ಲೋಟ್

ಜೈನ್ ಆಯುರ್ವೇದಿಕ್ ಮೆಡಿಕಲ್ ಕಾಲೇಜು ಘಟಿಕೋತ್ಸವಕ್ಕೆ ರಾಜ್ಯಪಾಲರಿಂದ ಚಾಲನೆ

ಉದಯಕಾಲ ನ್ಯೂಸ್

ಗದಗ: ಆಯುರ್ವೇದವು ಕೇವಲ ರೋಗಗಳನ್ನು ಗುಣಪಡಿಸುವ ವೈದ್ಯಕೀಯ ಪದ್ಧತಿಯಲ್ಲ ಆರೋಗ್ಯಕರ ಜೀವನಶೈಲಿಯನ್ನು ರೂಪಿಸುವ ವೈಜ್ಞಾನಿಕ ಜೀವನದರ್ಶನವಾಗಿದೆ. ಪ್ರಾಚೀನ ಋಷಿಮುನಿಗಳು ಆಯುರ್ವೇದ ತತ್ವಜ್ಞಾನವನ್ನು ಸಂರಕ್ಷಿಸುವ ಮೂಲಕ ಆಯುರ್ವೇದವನ್ನು ಜಾಗತಿಕ ಮಟ್ಟದಲ್ಲಿ ಇನ್ನಷ್ಟು ವಿಸ್ತೃತಗೊಳಿಸಿದ್ದಾರೆ ಎಂದು ಕರ್ನಾಟಕದ ಗೌರವಾನ್ವಿತ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಹೇಳಿದರು.

ಗದಗದಲ್ಲಿ ಬುಧವಾರ ಕೆಲ್ಕಾಗಾ ಮಂಟಪದ ಆವರಣದಲ್ಲಿ ಗುರುವಾರ ಜರುಗಿದ ಭಗವಾನ್ ಮಹಾವೀರ್ ಜೈನ್ ಆಯುರ್ವೇದಿಕ್ ಮೆಡಿಕಲ್ ಕಾಲೇಜಿನ ಘಟಿಕೋತ್ಸವ ಹಾಗೂ ಪ್ರತಿಭೆಯ ಅಭಿನಂದನೆ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

ಕರ್ನಾಟಕವು ಆಯುರ್ವೇದ, ಯೋಗ ಹಾಗೂ ಪ್ರಕೃತಿ ಚಿಕಿತ್ಸೆಯ ಕ್ಷೇತ್ರದಲ್ಲಿ ದೇಶದಲ್ಲೇ ವಿಶಿಷ್ಟ ಸ್ಥಾನವನ್ನು ಹೊಂದಿದ್ದು, ರಾಜ್ಯದ ವೈದ್ಯಕೀಯ ಶಿಕ್ಷಣ ಸಂಸ್ಥೆಗಳು ಮತ್ತು ವಿಶ್ವವಿದ್ಯಾಲಯಗಳು ಯುವಜನತೆಗೆ ಉತ್ತಮ ಭವಿಷ್ಯ ನಿರ್ಮಿಸುತ್ತಿವೆ ಎಂದರು.

ಭಾರತೀಯ ಸಂಸ್ಕೃತಿಯಲ್ಲಿ ವೈದ್ಯರನ್ನು ದೇವರ ಸ್ಥಾನಮಟ್ಟದಲ್ಲಿ ಪರಿಗಣಿಸಲಾಗಿದೆ. ಮರ್ಯಾದೆಗಳು ವೈದ್ಯರ ಜೀವನದ ಉದ್ದೇಶ ಸೇವೆಯಾಗಿರಬೇಕು ಎಂದು ಬೋಧಿಸಿದ್ದು ಭಗವಾನ್ ಮಹಾವೀರರು ಅಹಿಂಸಾ ಪರಮೋ ಧರ್ಮಾ ಎಂಬ ಶಾಶ್ವತ ಸಂದೇಶವನ್ನು ವಿಶ್ವಕ್ಕೆ ನೀಡಿದ್ದಾರೆ. ಆಯುರ್ವೇದದ ವೈದ್ಯರು ಈ ಮೌಲ್ಯಗಳನ್ನು ತಮ್ಮ ಜೀವನ ಹಾಗೂ ವೃತ್ತಿಯಲ್ಲಿ ಅಳವಡಿಸಿಕೊಂಡು ಸೇವಾಭಾವದಿಂದ ಕಾರ್ಯನಿರ್ವಹಿಸಬೇಕು ಎಂದು ಸಲಹೆ ನೀಡಿದರು.

ಆಯುರ್ವೇದವು ಜಾತ್ಯತೀತ ಆತ್ಮಸ್ಥಾಪಕ ವೈದ್ಯಕೀಯ ವೈದ್ಯಕೀಯ ವಿದ್ಯಾರ್ಥಿಗಳೆಲ್ಲರೂದಾಗಿದ್ದು, ಸುಷಿ-ಮುನಿಗಳ ಅಗಾದ ಅನುಭವ, ಆಸುಯದ ಮತ್ತು ಸಂಶೋಧನೆಯ ಫಲವಾಗಿ ವಿಕಸಗೊಂಡಿದೆ. ಸೃಷ್ಟಿ ಪ್ರಕೃತಿಯ ಆರೋಗ್ಯವನ್ನು ಕಾಪಾಡುವುದು ಹಾಗೂ ರೋಗಿಯ ರೋಗವನ್ನು ನಿವಾರಿಸುವುದು ಎಂಬುದೇ ಆಯುರ್ವೇದದ ಮೂಲ ಧ್ಯೇಯವಾಗಿದೆ ಎಂದು ಹೇಳಿದರು.

ಪ್ರಧಾನಮಂತ್ರಿ ನರೇಂದ್ರ ಮೋದಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಆಯುರ್ವೇದದ ಮಹತ್ವ ಸಿರಿಂತರ ಪ್ರತಿಪಾದಿಸುತ್ತಿದ್ದು, ಆಯುಷ್ ಕ್ಷೇತ್ರದ ಅಭಿವೃದ್ಧಿಗೆ ವಿಶೇಷ ಪ್ರೋತ್ಸಾಹ ನೀಡುತ್ತಿದ್ದಾರೆ. ಈ ಅವಕಾಶವನ್ನು ಬಳಸಿಕೊಂಡು ಆಯುರ್ವೇದವನ್ನು ಜಾಗತಿಕ ಮಟ್ಟದಲ್ಲಿ ಮತ್ತಷ್ಟು ಬಲಪಡಿಸಬೇಕು ಎಂದರು.

ವಿದ್ಯಾರ್ಥಿಗಳು ಉತ್ತಮ ವೈದ್ಯರಾಗಲು ಜ್ಞಾನ, ಕೌಶಲ್ಯ, ಪೋಷಕ ಮನೋಭಾವ ಹಾಗೂ ಕರುಣೆ ಎಂಬ ನಾಲ್ಕು ಗುಣಗಳು ಅತ್ಯಗತ್ಯ. ಮಹಾವೀರರ ಸತ್ಯ ಮತ್ತು ಅಹಿಂಸೆಯ ತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ರೋಗಿಗಳ ಸೇವೆಯಲ್ಲಿ ಕರುಣೆಯಿಂದ ತೊಡಗಿದರೆ ಚಿಕಿತ್ಸೆಯು ಇನ್ನಷ್ಟು ಫಲಪ್ರದವಾಗುತ್ತದೆ ಎಂದು ಹೇಳಿದರು.

ಘಟಿಕೋತ್ಸವದಲ್ಲಿ ಪದವಿ ಪಡೆದ ಎಲ್ಲ ವಿದ್ಯಾರ್ಥಿಗಳಿಗೆ ಅಭಿನಂದನೆ ಸಲ್ಲಿಸಿದ ರಾಜ್ಯಪಾಲರು, ಸಮಾಜದ ಆರೋಗ್ಯ ರಕ್ಷಣೆಯಲ್ಲಿ ತಮ್ಮ ಸೇವೆ ಅಮೂಲ್ಯ ಕೊಡುಗೆಯಾಗಲಿ ಹಾಗೂ ಆದರ ಭವಿಷ್ಯ ಉಜ್ಜ್ವಲವಾಗಿರಲಿ ಎಂದು ಶುಭ ಹಾರೈಸಿದರು.

ಕಾರ್ಗಿಲ್ ಶುಕ್ರ ಕಿರು ಚಾಟಿಕೆ ಗದಗ ಸೆಳೆತ: ಕಾರ್ಯಕ್ರಮದ ಆರಂಭದಲ್ಲಿ ಕಾಲೇಜಿನ ಪ್ರಾಚಾರ್ಯ ಡಾ. ನಾರಾಯಣಾಚಾರ್ ಕುಲಕರ್ಣಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಶಿಕ್ಷಣದೊಂದಿಗೆ ಸಂಸ್ಕಾರಕ್ಕೂ ಆದ್ಯತೆ: ಅಜಿತಕುಮಾರ

ಸಂಸ್ಥೆಯ ಕಾರ್ಯದರ್ಶಿ ಅಜಿತಕುಮಾರ ಬಾಗಮಾರ ಮಾತನಾಡಿ, ನಮ್ಮ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳಿಗೆ ಶಿಕ್ಷಣದ ಜೊತೆಗೆ ಉತ್ತಮ ಸಂಸ್ಕಾರವನ್ನೂ ನೀಡಲಾಗುತ್ತಿದೆ. ಇದರಿಂದ ವಿದ್ಯಾರ್ಥಿ ಸಮಾಜದಲ್ಲಿ ಆದರ್ಶ ನಾಗರಿಕರಾಗಿ ರೂಪುಗೊಳ್ಳಲು ಸಾಧ್ಯ ಎಂದರು. ಸಾಧನೆಗೆ ಹಿಂದೆ ಗುರು ಇರಬೇಕು, ಮುಂದೆ ಗುರಿ ಇರಬೇಕು ಎಂಬ ಮಾತಿನಂತೆ ವ್ಯತಿಯೊಬ್ಬ ವಿದ್ಯಾರ್ಥಿಯೂ ಗುರಿ ಹೊಂದಿ ಮುನ್ನಡೆಯಬೇಕು ಎಂದು ಕರೆ ನೀಡಿದರು.

ಇದೇ ಸಂದರ್ಭದಲ್ಲಿ ಕಾರ್ಗಿಲ್ ಯುದ್ಧದ ಹಿನ್ನೆಲೆಯ ಕುರಿತ ಕಿರು ನಾಟಕವನ್ನು ವಿದ್ಯಾರ್ಥಿಗಳು ಪ್ರದರ್ಶಿಸಿದ್ದು, ದೇಶಭಕ್ತಿ ಮತ್ತು ಸೈನಿಕರ ತ್ಯಾಗವನ್ನು ಬಿಂಬಿಸಿದ ಈ ನಾಟಕ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು.

ಕಾರ್ಯಕ್ರಮದಲ್ಲಿ ಭಗವಾನ್ ಮಹಾವೀರ್ ಜೈನ್ ಆಯುರ್ವೇದಿಕ್ ಮೆಡಿಕಲ್ ಕಾಲೇಜಿನ ಅಧ್ಯಕ್ಷ ಆರೋಕಕುಮಾರ ಬಾಗಮಾರ, ಸಂಸ್ಥೆಯ ಕಾರ್ಯದರ್ಶಿ ಅಜಿತಕುಮಾರ ಬಾಗಮಾರ, ನಿರ್ದೇಶಕರಾದ ಸಂಗೀತ ಜಿನವಾಲ, ಶಾಂತಾಬಾಯಿ ಬಾಗಮಾರ, ವರ್ಧಮಾನ ಬಾಗಮಾರ, ಪ್ರಾಚಾರ್ಯರು ಹಾಗೂ ಅಧ್ಯಾಪಕ ವೃಂದದವರು ಭಾಗವಹಿಸಿದ್ದರು.

ರಾಜ್ಯಪಾಲರ ಸೇವಾ ಮನೋಭಾವ ಶ್ಲಾಘನೀಯ: ಅಕೋಕಕುಮಾರ

ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಆರೋಕಕುಮಾರ ಬಾಗಮಾರ ಅಧ್ಯಕ್ಷತೆ ಮೇಲೆ ಮಾತನಾಡಿ, ಸಂಸ್ಥೆಯ ಇತಿಹಾಸದಲ್ಲಿ ಈ ಘಟಿಕೋತ್ಸವ ಸುವರ್ಣ ಕ್ಷಣಗಳಲ್ಲಿ ನಡೆಸಲಾಗುವ ಕಾರ್ಯಕ್ರಮವಾಗಿದೆ ಎಂದರು. ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರು ಕೇವಲ 12ನೇ ವಯಸ್ಸಿನಿಂದಲೇ ಸಾಮಾಜಿಕ ಸೇವೆಯಲ್ಲಿ ತೊಡಗಿಕೊಂಡಿದ್ದು, ಸತತ ಮೂರು ಬಾರಿ ಶಾಸಕರಾಗಿ, ಶಾಲ್ಯು ಬಾರಿ ಸಂಸದರಾಗಿ ಹಾಗೂ ಕೇಂದ್ರ ಸಚಿವರಾಗಿ ಸೇವೆ ಸಲ್ಲಿಸಿರುವ ಅವರ ಆನುಭವ ತೊಂದಿದ್ದಾರೆ. ಬಡವರು ಹಾಗೂ ದುರ್ಬಲರ ಕಲ್ಯಾಣಕ್ಕಾಗಿ ತಮ್ಮ ಜೀವನವನ್ನೇ ಸಮರ್ಪಿಸಿಕೊಂಡಿರುವ ಅವರು ದೇಶದ ಅಮೂಲ್ಯ ಆಸ್ತಿಯಾಗಿದ್ದಾರೆ ಎಂದು ಶ್ಲಾಘಿಸಿದರು. ನಮ್ಮಂತಹ ಶಿಕ್ಷಣ ಸಂಸ್ಥೆ ಆಕ್ಷಣ ಗರಿದಿಸಿ ಕಾರ್ಯಕ್ರಮಕ್ಕೆ ಆಗಮಿಸಿರುವುದು ನಮಗೆ ಹೆಮ್ಮೆಯ ಸಂಗತಿ. ಅವರ ಸರಳತೆ ಮತ್ತು ಹೃದಯವಂತಿಕೆಯೇ ಇದಕ್ಕೆ ಕಾರಣ ಎಂದು ಹೇಳಿದರು.

ಡಾ. ನಾರಾಯಣಾಚಾರ್ ಕುಲಕರ್ಣಿ ಉಪಸ್ಥಿತರಿದ್ದರು.

ಇದಲ್ಲದೆ ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರೋಹನ್ ಜಗದೀಶ್, ವಿವಿಧ ಇಲಾಖೆಗಳ ಅಧಿಕಾರಿಗಳು, ಶಿಕ್ಷಣ ಸಂಸ್ಥೆಗಳ ಪ್ರತಿನಿಧಿಗಳು, ಗಣ್ಯರು, ಅಧ್ಯಾಪಕರು, ವಿದ್ಯಾರ್ಥಿಗಳು ಹಾಗೂ ಪೋಷಕರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಎಸ್‌ಐಆರ್ ಶೇ. 91.07ರಷ್ಟು ಸಾಧನೆ: ಹಾನಗಲ್ ತಾಲೂಕು ರಾಜ್ಯಕ್ಕೆ ದ್ವಿತೀಯ

ಉದಯಕಾಲ ನ್ಯೂಸ್

ಹಾನಗಲ್: ಚುನಾವಣಾ ಆಯೋಗ ರಾಜ್ಯದಲ್ಲಿ ನಡೆಸುತ್ತಿರುವ ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆಯಲ್ಲಿ (ಎಸ್‌ಐಆರ್) ಹಾವೇರಿ ಜಿಲ್ಲೆ ಶೇ. 85.84ರಷ್ಟು ಗಮನಾರ್ಹ ಸಾಧನೆಯೊಂದಿಗೆ ರಾಜ್ಯದಲ್ಲಿ ದ್ವಿತೀಯ ಸ್ಥಾನದಲ್ಲಿದೆಯೆಂದು ಹಾನಗಲ್ ತಾಲೂಕು ಶೇ. 91.07 ಸಾಧನೆ ಮಾಡಿ ರಾಜ್ಯಕ್ಕೆ ದ್ವಿತೀಯ, ಜಿಲ್ಲೆಯ ವ್ಯಾಪ್ತಿಯ ಸ್ಥಾನ ಪಡೆದಿದೆ ಎಂದು ಶಾಸಕ ಶ್ರೀನಿವಾಸ ಮಾನೆ ಹೇಳಿದ್ದಾರೆ.

ಈ ಕುರಿತು ಗುರುವಾರ ಮಾಧ್ಯಮ ಹೇಳಿಕೆ ನೀಡಿರುವ ಅವರು, ಈ ಸಾಧನೆಯ ಹಿಂದೆ ಜಿಲ್ಲಾಡಳಿತ, ತಾಲೂಕುಆಡಳಿತ ಸಮರ್ಪಕ ಕಾರ್ಯ, ಬೂತ್ ಮಟ್ಟದ ಚುನಾವಣಾ ಅಧಿಕಾರಿಗಳು (ಬಿಎಲ್‌ಒ) ಹಾಗೂ ಸ್ವಯಂಸೇವಕ ನಿಷ್ಠೆ ಅಭಿನಂದನೆಗೆ ಕಾರ್ಯ ನಿರ್ವಹಿಸುತ್ತಿರುವ ಪ್ರತಿಯೊಬ್ಬರ ಶ್ರಮವೂ ಅಡಗಿದೆ. ಮತದಾರರ ಪಟ್ಟಿಯ ಪರಿಷ್ಕರಣೆ ಪ್ರಜಾಪ್ರಭುತ್ವದ ಜೀವನಾಡಿಯಾಗಿದ್ದು, ಅರ್ಹ ಪ್ರತಿಯೊಬ್ಬ ನಾಗರಿಕರ ಹೆಸರು ಪಟ್ಟಿಯಲ್ಲಿ ಸೇರ್ಪಡೆಯಾಗುವಂತೆ ಹಾಗೂ ಪಟ್ಟಿಯಲ್ಲಿನ ವಿವರಗಳು ನಿಖರವಾಗಿರುವಂತೆ ನೋಡಿಕೊಳ್ಳುವುದು ಅತ್ಯಂತ ಜವಾಬ್ದಾರಿಯುತ ಕಾರ್ಯವಾಗಿದೆ. ಈ ಮಹತ್ವದ ಕಾರ್ಯವನ್ನು ಹಾವೇರಿ ಜಿಲ್ಲೆ ಅತ್ಯಂತ ಪರಿಣಾಮಕಾರಿಯಾಗಿ ನಿರ್ವಹಿಸಿ ರಾಜ್ಯಕ್ಕೆ ದ್ವಿತೀಯಸ್ಥಾನ ಪಡೆದಿರುವುದಾಗಿದೆ ಎಂದು ಅವರು ಹರ್ಷ ವ್ಯಕ್ತಪಡಿಸಿದ್ದಾರೆ.

ಜಿಲ್ಲೆಯಲ್ಲಿ ಒಟ್ಟು 13,35,342 ಮತದಾರರ ಪೈಕಿ 11,46,288 ಮತದಾರರ ಮಾಹಿತಿ, ಹಾನಗಲ್ ತಾಲೂಕಿನಲ್ಲಿ 2,18,500 ಮತದಾರರ ಪೈಕಿ 1,99,056 ಮತದಾರರ ಮಾಹಿತಿ ಸಂಗ್ರಹವಾಗಿದೆ. ಮನೆ, ಮನೆಗೆ ತೆರಳಿ ಮತದಾರರ ಮಾಹಿತಿ ಸಂಗ್ರಹಿಸಿ, ಮತದಾರಿಕೆ ನಿಖರವಾದ ಮತದಾರರ ಪಟ್ಟಿಯನ್ನು ಸಿದ್ಧಪಡಿಸಲಾಗಿದೆ. ಬೂತ್ ಮಟ್ಟದ ಚುನಾವಣಾ ಅಧಿಕಾರಿಗಳು, ಸ್ವಯಂಸೇವಕರ ಸಮರ್ಪಕ ಕಾರ್ಯದಿಂದ ಈ ಸಾಧನೆ ಸಾಧ್ಯವಾಗಿದೆ ಎಂದು ಶ್ರೀನಿವಾಸ ಮಾನೆ ಹೇಳಿದ್ದಾರೆ.



ವಿತೇಷ ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯದಲ್ಲಿ ದೂರತೆ ಈ ಗೌರವ ಕೇವಲ ಒಂದು ಸ್ಥಾನಮಾನವಲ್ಲ, ಜನರ ಹಕ್ಕುಗಳನ್ನು ರಕ್ಷಿಸುವ ನಿಷ್ಠೆಯಿಂದ ಬದ್ಧತೆ ಮತ್ತು ಜವಾಬ್ದಾರಿಯ ಪ್ರತೀಕ. ಪ್ರಜಾಪ್ರಭುತ್ವ ವ್ಯವಸ್ಥೆಯ ಬಲಿಷ್ಠವಾಗಲು ನಿಖರವಾದ ಮತದಾರರ ಪಟ್ಟಿ ಅತ್ಯಂತ ಅಗತ್ಯವಾಗಿದೆ. ಈ ನಿಟ್ಟಿನಲ್ಲಿ ಅಧಿಕಾರಿಗಳು ಹಾಗೂ ಸಿಬ್ಬಂದಿ ತೋರಿದ ಕಾರ್ಯನಿಷ್ಠೆ ಶ್ಲಾಘನೀಯ.

-ಶ್ರೀನಿವಾಸ ಮಾನೆ, ಶಾಸಕ

ಅಧಿಕಾರಿಗಳು, ಸಿಬ್ಬಂದಿ ತೋರಿಸುತ್ತಿರುವ ಬದ್ಧತೆ ಶ್ಲಾಘನೀಯವಾಗಿದೆ. ಇದು ಪ್ರಜಾಪ್ರಭುತ್ವದ ಪ್ರಧಾನ ಸ್ತಂಭವಾದ ಚುನಾವಣಾ ವ್ಯವಸ್ಥೆಯನ್ನು ಇನ್ನಷ್ಟು ಬಲಪಡಿಸುವ ಮತ್ತಷ್ಟು ಹೆಜ್ಜೆಯಾಗಿದೆ. ಈ ಸಾಧನೆ ವ್ಯವಸ್ಥೆಯ ಕಾರ್ಯಕ್ಷಮತೆ, ಅಧಿಕಾರಿಗಳ ದಕ್ಷತೆ ಸಮನ್ವಯ. ಜಿಲ್ಲೆಯಾದ್ಯಂತ ತಾಲೂಕು, ಹೋಬಳಿ, ಗ್ರಾಮಮಟ್ಟದ ಅಧಿಕಾರಿಗಳ ಕಾರ್ಯವೈಖರಿಗೆ ದೊರೆತ ಗೌರವವಾಗಿದೆ.

ಇದಕ್ಕೆ ಕಾರಣರಾದ ಅಧಿಕಾರಿ ವರ್ಗ, ಬೂತ್ ಏಜೆಂಟರು, ಕಾಗೆಗಳ ಪಕ್ಷದ ಪದಾಧಿಕಾರಿಗಳು, ಮುಖಂಡರು, ಕಾರ್ಯಕರ್ತರಿಗೆ ವಿಶೇಷ ಅಭಿನಂದನೆ ಸಲ್ಲಿಸುವುದಾಗಿ ಶ್ರೀನಿವಾಸ ಮಾನೆ ಹೇಳಿದ್ದಾರೆ.

ಶಿಗ್ಗಾಂವಿ: ಪಟ್ಟಣದ ಶ್ರೀ ಚನ್ನಪ್ಪ ಕುರುಗೂರ ಇಂಟರ್ನ್ಯಾಷನಲ್ ಶಾಲೆಯಲ್ಲಿ ಮಕ್ಕಳಿಗೆ ಮಂಗಳವಾರ ಆಕ್ಷರ ಅಭ್ಯಾಸ ಕಾರ್ಯಕ್ರಮ ನಡೆಯಿತು. ವೇ. ತರಲಿಯ್ಯ ಬಿನ್ನೂರಮಠ ಆದರು ಮಕ್ಕಳಿಗೆ ಕಾಮೋಕ್ಷವಾಗಿ ಆಕ್ಷರ ಅಭ್ಯಾಸ ಮಾಡಿಸಿದರು. ಸಂಸ್ಥೆಯ ಆಡಳಿತಾಧಿಕಾರಿ ಮಂಜುನಾಥ ಬ್ಯಾಳಿ, ಮುಖ್ಯೋಪಾಧ್ಯಾಯ ಜಿ.ಬಿ. ಶಿವೂರ, ಅಕ್ಕಯ ಹೊಂಬಳಿಮಠ, ಸುರಾ ಸವಲಗುಂದ, ಶಿಕ್ಷಕರು, ಹಾಗೂ ಪಾಲಕರು, ಸಿಬ್ಬಂದಿ ಇದ್ದರು.



ಹಾವೇರಿಯ ಸ್ವಾಮಿ ವಿವೇಕಾನಂದ ಸೇವಾ ಸಮಿತಿ ಮತಿಯಿಂದ ಬಮೇಕ್ಕರ ನಗರದ 'ಸಿ' ಬ್ಲಾಕ್ ರೈಲ್ವೆ ಗೇಟ್ ಪಕ್ಕದ ನಿರ್ಮಿಸಲಾದ ಶ್ರೀ ಛತ್ರೇಶ್ವರರ ರೇವಣ್ಣಾನವರ ಮೂರ್ತಿ ಪ್ರತಿಷ್ಠಾಪನೆ ಮತ್ತು ರೇವಣ್ಣಾರ ರೋಕಾರ್ಚನೆ ಕಾರ್ಯಕ್ರಮದ ಪ್ರಚಾರ ಮಾಮಗಿಯಿಸ್ತು ರೇವಣ್ಣಾರ ಆವರಣದಲ್ಲಿ ಮಂಗಳವಾರ ರಿಯಗಡಗೊಳಿಸಲಾಯಿತು. ಸಮಿತಿ ಅಧ್ಯಕ್ಷ ಕಿಮಾ ದಿಲಾಪುರ್, ಡಾ. ಪ್ರಭು ಯಮಸೂರ್, ಡಾ. ಮತಿರೇನಿ ಕಣಿ, ಪರೋಕ್ಷ ಇಂಗಳಗುಂಡಿ, ಶಿವಾನಂದ ಕಡದರ, ಡಿ.ಎಸ್ ಪೂಜಾರ, ಬಮೇಕ್ಕರ ಕೂರೇ, ಕುಮಾರ್ ಹಡದರ, ಈ.ಸಿ ಆಡಿಟಾಳಿ, ವಿ.ಎಸ್. ಅಲಿರಟ್ಟಿ ಇತರರಿದ್ದರು.

ದಲಿತ ವಿದ್ಯಾರ್ಥಿಗೆ ಜಾತಿ ನಿಂದನೆ: ಕ್ರಮಕ್ಕೆ ಆಗ್ರಹ

ಉದಯಕಾಲ ನ್ಯೂಸ್

ಶಿಗ್ಗಾಂವಿ: ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಸಾಮಾಯ ಕುಲಸಚಿವ ಶಹಬಾಜಾನಾಬಾ ಮುದಕೆಯ ವಿದ್ಯಾರ್ಥಿಯಲ್ಲದ ಸಂಸ್ಥೆಯ ಸಾಮಾಯ ಕುಲಸಚಿವ ಶಹಬಾಜಾನಾಬಾ ಮುದಕೆಯ ವಿದ್ಯಾರ್ಥಿಗಳ ಜಾತಿ ನಿಂದನೆ ಮಾಡಿ, ಕೆಲಸ ಕಳೆದುಕೊಳ್ಳುವ ಬೆದರಿಕೆ ಹಾಕಿದ ಆರೋಪ ಕೇಳಿಬಂದಿದೆ. ಸಂಸ್ಥೆಯ ಕುಲಸಚಿವರ ಕಚೇರಿಯಲ್ಲಿ ಸಂಭವಿಸಿದ ಈ ಘಟನೆ ಕುರಿತು ಸಂಸ್ಥೆಯ ಆಡಳಿತ ಮಂಡಳಿ ಮತ್ತು ಸಿಬ್ಬಂದಿ ವಿರುದ್ಧ ಕ್ರಮ ಕೈಗೊಳ್ಳಲು ಆಗ್ರಹಿಸಲಾಗಿದೆ.

ಎನ್‌ಸಿಸಿ ವಿದ್ಯಾರ್ಥಿಗಳ ಎಚ್ಚರಿಕೆಗಾಗಿ ನಡೆದ ಮೀಸಲಿಟ್ಟ ವೇಳೆ ಸಾಮಾಯಕ ಕುಲಸಚಿವ ಶಹಬಾಜಾನ್ ಮುದಕೆಯ ವಿದ್ಯಾರ್